'ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ಈ ಕೆಳಕಂಡ ವಿಧಾನಸಭೆಯ ವಿಧೇಯಕಗಳನ್ನು ದಿನಾಂಕ: 13.2.2004 ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿರುತ್ತಾರೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕ 2004
2. ತಿರುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕ 2004
3. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2004

ಅಧ್ಯಕ್ಷರು: ವಿಶ್ವನಾಥ್ ರವರೇ, ಈಗ ತಮ್ಮ ವಿಧೇಯಕವನ್ನು ತೆಗೆದುಕೊಳ್ಳೋಣ.

5. ಶಾಸನ ರಚನೆ

i ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2004

†ಶ್ರೀ ಜೆಚ್. ವಿಶ್ವನಾಥ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ಮಾನ್ಯ ಶಿವಾನಂದ ಪಾಟೀಲರು ಮಾತನಾಡಿದ್ದಾರೆ.

ಶ್ರೀ ಎಸ್. ಶಿವಾನಂದ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾವು ನಿಮಗೆ ಮಂಡಿಸಿರಿ ಎಂದೆ, ಆದರೆ ಇನ್ನೂ ಚರ್ಚೆನೇ ಪ್ರಾರಂಭವಾಗಿಲ್ಲ, ಅವರು ಮಂಡಿಸಲಿ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಅಧ್ಯಕ್ಷರೇ, ಯಾವುದೇ ಚರ್ಚೆ ಇಲ್ಲದೆ ಇದನ್ನು ಪಾಸ್ ಮಾಡೋಣ. ಅದಕ್ಕೆ ನಮ್ಮ ತಕರಾರು ಇಲ್ಲ. ಇದರ ಬಗ್ಗೆ ನಾವು ಮಂತ್ರಿಗಳಿಗೆ ಹೇಳಿದ್ದೇವೆ. ಏಮಾಬಾತ್ಮಕ ವಿಷಯವನ್ನು ತೆಗೆದುಬಿಟ್ಟರೆ ಒಳ್ಳೆಯದು. ಯಾವುದು ಏಮೆ ಮಾಡಿಸಲು ಬ್ಯಾಂಕುಗಳಿಗೆ ವಿಶೇಷ ಒಬ್ಬಂದ ಬೇಕಾಗಿದೆ. ಇದು ಅವಶ್ಯ ಇದೆ. ಕೋರ್ಟ್ ಹೇಳಿದೆ. ಇದೊಂದಕ್ಕೆ ಅವರು ಒಪ್ಪಿಕೊಂಡು ಉಳಿದದ್ದು ಎಲ್ಲಾ ಬಿಟ್ಟು ಬಿಟ್ಟರೆ ನಾವು ಯಾವುದೇ ಚರ್ಚೆಯಿಲ್ಲದೆ ಒಪ್ಪುತ್ತೇವೆ. ಅದು ಬೇಕಾಗುತ್ತದೆ. ಅದನ್ನು ಮಾಡಿಕೊಡಿ. ನೀವು ರಿಸರ್ವ್ ಬ್ಯಾಂಕ್‌ನದ್ದು ಮಾಡಬೇಕಾಗುತ್ತದೆ. ರಿಸರ್ವ್ ಬ್ಯಾಂಕ್ ಆದೇಶ ಇದೆ. ಅದು ಆ್ಯಕ್ಟ್‌ನಲ್ಲಿ ಅನಿವಾರ್ಯ ಇದೆ. ಉಳಿದದ್ದು ಯಾವುದೂ ಬೇಕಾಗುವುದಿಲ್ಲ. ಆ ಆ್ಯಕ್ಟ್‌ನ ಕಾನ್ಸೆಪ್ಟ್ ಬೇರೆ ಇದೆ. ಆ ಕಾರಣದಿಂದ ಮಾನ್ಯ ಮಂತ್ರಿಗಳ ಜೊತೆ ಮಾತನಾಡಿದ್ದೇವೆ. ಇಷ್ಟು ಕೊಟ್ಟುಬಿಟ್ಟರೆ ನಮ್ಮದೇನೂ ತಕರಾರು ಇಲ್ಲ. ಇಲ್ಲದೆ ಇದ್ದರೆ ಚರ್ಚೆ ಬಹಳ ದೀರ್ಘವಾಗಿ ಹೋಗುತ್ತದೆ. ಅನಿವಾರ್ಯವಾಗಿ ಮತ್ತೆ ಕೊನೆ ದಿವಸ ನಾವು ಅಲ್ಲಿ (ಬಾವಿಗೆ) ಬಂದು ಮತ್ತೆ ನೀವು ಅದಕ್ಕೆ ಕೊಂಬರೆ ಪಡುವುದು. ಮುಂದೆ ಹೋಗುವುದು ಆಗಬಾರದು. ಪರಿಸ್ಥಿತಿ ಆ ಮಟ್ಟಕ್ಕೆ ಹೋಗುತ್ತದೆ. ಈಜೋದು ಬೇಡ ಎಂದು ಅವರ ಹತ್ತಿರ ಹೇಳಿಕೊಂಡಿದ್ದೇವೆ. ಇನ್ನು ಎರಡು ತಿಂಗಳ ಮೇಲೆ ಬೇಕಾದರೆ ನೋಡಬಹುದು ಎಂದರೆ ಮಾಡೋಣ.

ಅಧ್ಯಕ್ಷರು: ನೀರು ಇದ್ದರೆ ತಾನೇ ನೀವು ಈಜೋದು.

ಶ್ರೀ ಎಸ್.ಎಸ್. ಪಾಟೀಲ್: ಇದೊಂದು ಆ್ಯಕ್ಟ್‌ನಲ್ಲಿ ಸರ್ಕಾರದವರು ಕೈ ಹಾಕಬೇಡಿರಿ. ಇದರ ಮೇಲೆ ಬಹಳ ವಿವರವಾಗಿ ಚರ್ಚೆಯಾಗಬೇಕಾಗುತ್ತದೆ. ಇಲ್ಲದೇ ಇದ್ದರೆ ಜಂಟಿ ಸದನ ಸಮಿತಿಗೆ ಹೋಗಬೇಕಾಗುತ್ತದೆ. ಅದಕ್ಕಾಗಿ ನಾನು ಹೇಳುವುದು ಇದು ಬೇಕಾಗುತ್ತದೆ. ನಾನು ಒಪ್ಪಿಕೊಳ್ಳುತ್ತೇನೆ, ಇದು ಒಂದು ಭಾಗ ಅವರು ಒಪ್ಪಿಕೊಂಡು ಖಂಡಿತವಾಗಿ ಯಾವ ಚರ್ಚೆ ಕೂಡ ಬೇಗ ಮುಗಿಸಿಬಿಡೋಣ.

ಶ್ರೀ ಜೆಚ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಮಾನ್ಯ ಪಾಟೀಲ್‌ರವರು ಇಲಾಖೆಯನ್ನು ನಡೆಸಿದಂತವರು. ಸೌಹಾರ್ದ ಕಾನೂನು ಬರುವಂತಹ ಸಂದರ್ಭದಲ್ಲಿ ಕೂಡ ಮಂತ್ರಿಯಾಗಿದ್ದವರು.

ನಿಜ, ಈ ಸೌಹಾರ್ದ ಕಾನೂನಿನ ಮೂಲ ತಿರುಳು ಸರ್ಕಾರದ ಹಸ್ತಕ್ಷೇಪ ಇರಬಾರದು, ನಾವು ನಾನು ಪರಸ್ಪರ ಕಲೆತು ಈ ಸಂಸ್ಥೆಯನ್ನು ರಚನೆ ಮಾಡಿಕೊಂಡು ಹೋಗವಂತಾದ್ದು ಇದೆ. ಅದು ಸಹಕಾರದ ನೀತಿ. ಇದು ಮೇಲ್ಮನೆಯಲ್ಲಿ ಚರ್ಚೆಗೆ ಬಂದಂತಹ ಸಂದರ್ಭದಲ್ಲಿ ಅಲ್ಲಿಯೂ ಕೂಡ ಕೆಲಸವನ್ನು ಗುರುತು ಹಚ್ಚಿ ಹೇಳಿದ್ದಾರೆ. ನಮ್ಮಲ್ಲಿ ಏನಿತ್ತು ಎಂದರೆ ಕಾನೂನಿನಲ್ಲಿ ಸೋಮೋಟೋ ಇನ್ಸ್‌ಪೆಕ್ಷನ್ ರಿಜಿಸ್ಟಾರ್ ಆಫಿ ಕೋ-ಆಪರೇಟೀವ್ ಸೊಸೈಟಿಗಳಿಗೆ ಅವಕಾಶ ಕೊಟ್ಟಿತ್ತು. ಅದನ್ನು ಮೇಲ್ಮನೆ ಹಿರಿಯ ಸದಸ್ಯರು, ವಾಪಸ್ಸು ತೆಗೆದುಕೊಂಡು ಬಿಡಿ, ಅದು ಸೋಮೋಟೊ ಆಗಬಾರದು ಅಥವಾ ಯಾರಾದರೂ ಒಬ್ಬರು ಅರ್ಜಿ ಕೊಟ್ಟರೆ ಸಾಕು ಎಂದು ಇತ್ತು, ಅದು ಬೇಡವೆಂದು ಹೇಳಿದರು. ಕೊನೇಪಕ್ಷ 1:10 ಜನರು ಅರ್ಜಿ ಕೊಟ್ಟರೆ, ಅದರ ಆಧಾರದ ಮೇಲೆ ಅಲ್ಲಿ ರಿಜಿಸ್ಟಾರ್ ಎನ್‌ಕ್ವೈರಿ ಮಾಡುವುದಕ್ಕೆ ಅವಕಾಶ ಮಾಡುವಂಥಾದ್ದು ಇತ್ತು. ಅದಕ್ಕೆ ಒಪ್ಪಿಕೊಳ್ಳಲಾಯಿತು. ಸೋಮೋಟೋ ಅದನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ಅದರ ಜೊತೆಗೆ ಸೂಪರ್ ಸೆಕ್ಷನ್ ಕೂಡ ಇತ್ತು. ಅದಕ್ಕೆ ಅವಕಾಶ ಇರಬಾರದು ಎಂದಾಗ ಅದನ್ನೂ ಕೂಡ ವಾಪಸ್ಸು ತೆಗೆದುಕೊಂಡೆವು. ಇನ್ನು ನಾಮಿನೇಷನ್‌ಗೆ ಕೊಟ್ಟಿದ್ದರು. ಅದು ಇರಬಾರದೆಂದು ಹೇಳಿದಾಗ ಅದನ್ನೂ ವಾಪಸ್ಸು ತೆಗೆದುಕೊಂಡೆವು. ಹೀಗೆ ಏನು ಆತಂಕ ಇತ್ತು ಅದನ್ನೆಲ್ಲಾ ವಾಪಸ್ಸು ತೆಗೆದುಕೊಂಡು ಮೇಲ್ಮನೆಯಲ್ಲಿ ಇದನ್ನು ಒಪ್ಪಿಗೆ ಕೊಟ್ಟು ಇಲ್ಲಿ ಬಂದಿದೆ. ಮತ್ತು ಮಾನ್ಯ ಎಸ್.ಎಸ್. ಪಾಟೀಲ್ ಅವರು ಇನ್ನು ಯಾವುದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ ಎಂದರೆ ಯಾರೂ ಕೂಡ ಇದರೊಳಗೆ ಹೋಗಬಾರದು ಎಂದು. ಯಾರೂ ಹೋಗಬಾರದು ಎಂದರೆ, ಆಯಿತು, ಫೆಡರಲ್ ಕೋ-ಆಪರೇಷನ್ಸ್ ಏನಿದೆ ನಮ್ಮ ಸ್ಟಕ್ಚರ್, ಅದರ ಬಗ್ಗೆ ಇಲ್ಲಿ ಯಾರಾದರೂ ಪ್ರಶ್ನೆ ಹಾಕಬಹುದು. ಇಲ್ಲಿ ಯಾರಾದರೂ ಪ್ರಶ್ನೆ ಮಾಡಿದರೆ, ಏನು ಸ್ವಾಮಿ, ನಿಮ್ಮ ಸೌಹಾರ್ದ ಸಹಕಾರಿಯಿಂದ ಬಹಳ ಅನಾಹುತವಾಗುತ್ತಿದೆ, ಎಂದಾಗ, ಅದಕ್ಕೆ ಸರ್ಕಾರ ಏನು ಉತ್ತರ ಕೊಡಬೇಕು? ನಾವು ಮಂತ್ರಿಗಳು ಸೌಹಾರ್ದದಲ್ಲಿ ಹೋಗಿ ಕುಳಿತುಕೊಂಡು ಉತ್ತರವನ್ನು ತರುವುದಕ್ಕೆ ಆಗುತ್ತದೆಯೇ? ಅದಕ್ಕಾಗಿ ಅಲ್ಲಿ ನಮ್ಮ ಅಧಿಕಾರಿಗಳು, ರಿಜಿಸ್ಟಾರ್‌ಗಳು ಇರುತ್ತಾರೆ. He is the registering authority. ಅವರು ಹೋಗಿ, ಏನ್ರಿ ಇಲ್ಲಿ ಸೌಹಾರ್ದದಲ್ಲಿ ಇಂಥಿಂಥ ಅನಾಹುತಗಳು ಆಗಿವೆ, ಎಂದು ಸರ್ಕಾರಕ್ಕೆ ವರದಿಯನ್ನು ಮಾಡುತ್ತಾರೆ. ಇಲ್ಲಿ ಮಾನ್ಯ ಎಸ್.ಎಸ್. ಪಾಟೀಲ್‌ರವರು ಯಾರೂ ಕೂಡ ಒಳಗೆ ಹೋಗಕೂಡದು ಎಂದು ಹೇಳುತ್ತಾರೆ: ಇದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ನಾನು ಯಾರು ಒಳಗೆ ಹೋಗಬಾರದೆಂದು ಹೇಳಿಲ್ಲ, ಆ ಕಾಯಿದೆಯ ಉದ್ದೇಶ ಏನು ಇದೆ, ಅದರ ಮೂಲ ಕಲ್ಪನೆ ಏನಿದೆ, ಆ ಕಲ್ಪನೆಗೆ ಕೊಡಲಿ ಪೆಟ್ಟು ಬಿದ್ದಿದೆ, ಎಂದು ನಾನು ಹೇಳುವಂಥಾದ್ದು. ನಾವು ಕಾಯಿದೆಯನ್ನು ಜಾರಿಗೆ ತಂದಿದ್ದೇವೆಂದಾಗ, ಸರ್ಕಾರಕ್ಕೆ ಅಧಿಕಾರವಿದ್ದೇ ಇರುತ್ತದೆ, ನೀವು ಅದನ್ನು ಹೋಗಿ ನೋಡಬಾರದೆಂದು ಅಲ್ಲ.

ಶ್ರೀ ಹೆಚ್. ವಿಶ್ವನಾಥ್: ಮಾನ್ಯ ಎಸ್.ಎಸ್. ಪಾಟೀಲ್‌ರವರೆ, ಈಗ ಸುಮ್ಮನೆ ಅನಾವಶ್ಯಕವಾಗಿ ಚರ್ಚೆ ಮಾಡುವುದು ಬೇಡ, ನಾವು ಒನ್ ಬೈ ಒನ್ ಅಮೆಂಡ್‌ಮೆಂಟ್ ಅನ್ನು ಕೊಟ್ಟಿದ್ದೇವೆ, ಅದನ್ನು ನಾನು ವಾಪಸ್ಸು ತೆಗೆದುಕೊಂಡಿದ್ದೇನೆ, ಸರ್ಕಾರ ಕನ್ವಿಡ್ ಆಗಿದೆ, ಸರ್ಕಾರ ಸರ್ವಾಧಿಕಾರಿಯಲ್ಲ, ಸರ್ವ ಸದಸ್ಯರೊಡನೆ ಸಹಗೂಡಿ ಹೋಗಬೇಕೆಂಬ ದೃಷ್ಟಿಯಿಂದ ಮೇಲ್ಮನೆಯಲ್ಲಿ ಒಪ್ಪಿಕೊಂಡು ಒಂದು ಗಂಟೆಗಳ ಕಾಲ ಚರ್ಚೆಯನ್ನು ಮಾಡಿದ್ದೇವೆ. ಈಗ ನಾವು ಇಷ್ಟೆಲ್ಲಾ ವಾಪಸ್ಸು

ತೆಗೆದುಕೊಂಡಿದ್ದೆವಲ್ಲ; ಇನ್ನು ಯಾವುದನ್ನು ಮಾಪಸ್ಸು ತೆಗೆದುಕೊಳ್ಳಬೇಕು, ಯಾವ ಸೆಕ್ಷನ್ ಅನ್ನು ಮಾಪಸ್ಸು ತೆಗೆದುಕೊಳ್ಳಬೇಕೆಂದು ತಾವು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್: ಇದಕ್ಕೆ ಚರ್ಚೆಯಾಗಬೇಕೆಂದರೆ ಸಂಜೆಯವರಿಗೆ ನೀವು ಉತ್ತರವನ್ನು ಹೇಳಬೇಕಾಗುತ್ತದೆ, ಆಮೇಲೆ ಚರ್ಚೆನಾನು ಮಾಡಬೇಕಾಗುತ್ತದೆ, ಅದು ಹುರುಪಾಗುತ್ತದೆ, ನಾನು ಹೇಳುವಂಥಾದ್ದು ನನಗೆ ಕನ್ವಿನ್ಸ್ ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ನಾನು ಮಾಡುತ್ತೇನೆ, ಇಲ್ಲವೆಂದು ಹೇಳುವುದಿಲ್ಲ, ಆದರೆ ಟೈಮ್ ಇಲ್ಲ, ನೀವು ಇನ್ನು ಸದನವನ್ನು ಕಂಟಿನ್ಯೂ ಮಾಡುತ್ತೇವೆಂದರೆ ಮಾಡಿ, ಇಲ್ಲವೆಂದರೆ ನಾನು ಹೇಳುವಂಥಾದ್ದು, ನೀವು ವಿವರವಾಗಿ ಒಂಬೊಂದೇ ಅಮೆಂಡ್‌ಮೆಂಟ್ ಅನ್ನು ತೆಗೆದುಕೊಂಡು ಬನ್ನಿ, ಇಡೀ ಜಿಲ್ಲೆಯನ್ನು ಪೂರ್ಣ ಮುಗಿಸುವಂತಹ ವ್ಯವಸ್ಥೆ ಇದರಲ್ಲಿ ಆಗಿದೆ, ರೈತರಿಂದ ಸಂಪೂರ್ಣ ಅಧಿಕಾರವನ್ನು ಕಿತ್ತುಕೊಂಡಿದ್ದಾರೆ. ಎಲ್ಲಿ ಸಂಯುಕ್ತ ಸಹಕಾರ ಇದೆಯೋ, ಅಲ್ಲಿ ರಿಜಿಸ್ಟ್ರಾರ್‌ಗಳು, ನಾನು ಹೇಳುವುದೇನೆಂದರೆ ಹೈ ಕೋರ್ಟ್ ಡಿವಿಶನ್ ಆಯಿತು, ಇವರು ಒಂದು ಆರ್ಡರ್ ಅನ್ನು ಮಾಡಿದ್ದಾರೆ, ಇಲ್ಲಿ ಕಾಯಿದೆಯಲ್ಲಿ ಇಲ್ಲದಿದ್ದರೂ ಒಂದು ಆದೇಶವನ್ನು ಹೊರಡಿಸಿದ್ದಾರೆ, ಇದರ ಮೇಲೆ ಕೋರ್ಟ್‌ಗೆ ಹೋಗಿದ್ದಾರೆ, ಅಲ್ಲಿ ಏನು ಹೇಳಿಬ್ಬಾರೆಂದರೆ, ಇಲ್ಲಿ 10–15 ಜನರು ಷೇರನ್ನು ಕೂಡಿಸಿಕೊಂಡು ಮಾಡಿ, ಬೆಳೆಸಿಕೊಳ್ಳಲಿ ಎಂದು ಹೇಳಿದೆ, ಆದರೆ ಕಾಯಿದೆಯಲ್ಲಿ ಅವಕಾಶವಿಲ್ಲ, ಎರಡು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ, ಕನಿಷ್ಠ ಮೂರು ನೂರು ಸದಸ್ಯರು, ಐದು ಲಕ್ಷ ರೂ.ಗಳ ಡಿಪಾಸಿಟ್, ಅಂದರೆ ಅಲ್ಲಿ ಯಾರೂ ರಿಜಿಸ್ಟ್ರೇಷನ್ ಮಾಡಿರಬಾರದು, ಅಂದರೆ ಯಾವ ಸೊಸೈಟಿಗೂ ಈ ಹಣವನ್ನು ಇವರು ಹಾಕುವುದಿಲ್ಲ; ಮತ್ತೆ 2 ಲಕ್ಷ ರೂ.ಗಳಿಂದ 5 ಲಕ್ಷ ರೂ.ವರೆಗೆ ನಾಲ್ಕು ನೂರು ಮಂದಿ ಸದಸ್ಯರು, ಎಂಟು ಲಕ್ಷ ರೂ.ಗಳ ಡಿಪಾಸಿಟ್, ಷೇರು ಹಣವನ್ನು ಕೂಡಿಸಬೇಕು; ಇದರ ಹಾಗೆ ಮೂವತ್ತು ಲಕ್ಷ ರೂ.ಗಳು ಈ ರೀತಿ ಎಲ್ಲಾ ಹಾಕಿ, ಆ ಸೌಹಾರ್ದಕ್ಕೆ ಯಾರೂ ಹೋಗದ ಹಾಗೆ ಇರಬೇಕು. ಇದಕ್ಕೆ ಅವರು ಕೋರ್ಟ್‌ಗೆ ಹೋದರು; ಅಲ್ಲಿ ಇವರು ತಪ್ಪು ಎಂದು ಹೇಳಿದರು, ಆ ರೀತಿ ಮಾಡಿ ಇವರು ಉಪಾಯದಿಂದ ಇದನ್ನು ಹಾಕಿಕೊಂಡಿದ್ದಾರೆ; ಅಂದರೆ ಬೇಕಾದ್ದು ಅವರಿಗೆ ಮಾಡುವುದಕ್ಕೆ ಬರಬೇಕು. ಈ ರೀತಿ ನೀವು ಮಾಡಿದರೆ ಹೇಗೆ? ಇದರ ಬಗ್ಗೆ ನಾನು ಕನ್ವಿನ್ಸ್ ಮಾಡುತ್ತೇನೆ, ಬೇಕಾದರೆ ಕುಳಿತು 2–3 ದಿವಸಗಳು ಚರ್ಚೆ ಮಾಡೋಣ, ಇಲ್ಲೆ ಇದೆಯಲ್ಲಾ, ಇವೆಲ್ಲಾ ಇರಬಾರದು, ಇಲ್ಲಿ ಪರಂತು, ಯಾವುದೇ ಸಹಕಾರಿಯು ಆರ್ಥಿಕವಾಗಿ ಅಭದ್ರವಾಗುವ ಸಂಭವವಿದ್ದರೆ ಅಥವಾ ಅದನ್ನು ನೋಂದಣಿ ಮಾಡುವುದರಿಂದ ಸಹಕಾರಿ ಚಳುವಳಿಯ ಅಭಿವೃದ್ಧಿಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ ಎಂದು ಕಂಡು ಬಂದರೆ ಅದು ನೋಂದಾಯಿತವಾಗತಕ್ಕದ್ದಲ್ಲ, ಇದು ಒಂದೇ ಇವರಿಗೆ ಸಾಕು; ಮಾಡುವುದೇ ಇಲ್ಲ ರಿಜಿಸ್ಟ್ರೇಷನ್, ನಿಮಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ, ನಮ್ಮಲ್ಲಿ ಒಬ್ಬರು ಜಾಯಿಂಟ್ ರಿಜಿಸ್ಟ್ರಾರ್ ಇದ್ದರು, ಅರ್ಬನ್ ಬ್ಯಾಂಕ್‌ನಲ್ಲಿ ದುಡ್ಡು ತೆಗೆದುಕೊಳ್ಳದೇ, ಅವರು ರಿಜಿಸ್ಟ್ರೇಷನ್ ಮಾಡುತ್ತಲೇ ಇರಲಿಲ್ಲ, ಕೊನೆಗೆ ಅವರನ್ನು ತೆಗೆದುಹಾಕಿದೆ. ಇದೆಲ್ಲಾ ಮಾಡುವುದಕ್ಕೆ ಇದು ಅಸರೆಯಾಗುತ್ತದೆ, ಇದು ವ್ಯವಸ್ಥೆಯಾಗುತ್ತದೆ, ಆದಕಾರಣ ಇವೆಲ್ಲಾ ಇರಬಾರದು, ಇದು ಏಕೆ ಇರಬೇಕು? ಇಂಥಾದ್ದನ್ನು ಇವರು ಇಟ್ಟುಕೊಂಡಿದ್ದಾರೆ, ಇದೆಲ್ಲವನ್ನೂ ನೀವು ಓದಿಲ್ಲ, ಮುಂದೆ ಎಲ್ಲೆಲ್ಲಿ ಸಂಯುಕ್ತ ಸಹಕಾರಿ ಎಂದು ಇಟ್ಟಿದ್ದೀರಿ, ಅಲ್ಲೆಲ್ಲಾ ರಿಜಿಸ್ಟ್ರಾರ್, ನಾನು ಹೇಳುವುದೇನೆಂದರೆ ಇದು ಒಂದು ವಿಶಿಷ್ಟವಾದಂತಹ ಕಾಯಿದೆಯಾಗಿದೆ, ಇದನ್ನು ನಾನು ಮಾಡಿಲ್ಲ, ಮೊದಲು ಮಧು

ಎಂಬ ಒಬ್ಬ ರಿಜಿಸ್ಟಾರ್ ಇದ್ದರು, ಅವರು ಬಹಳ ಜವಾಬ್ದಾರಿಯನ್ನು ತೆಗೆದುಕೊಂಡು, ಆಗಿನ ಅಧಿಕಾರಿಗಳೆಲ್ಲರನ್ನೂ ಕೂರಿಸಿಕೊಂಡು ಮಾತನಾಡಿ, ನಂತರ ನನಗೆ ಕನ್ವಿನ್ಸ್ ಮಾಡಿದರು, ನಾನು ಇದನ್ನು ನಿಜವಾಗಿ ಹೇಳುತ್ತಿದ್ದೇನೆ, ಅವರು ಇದನ್ನು ಸಪರೇಟ್ ಮಾಡಿ ಇಡೋಣವೆಂದು ಅವರು ಹೇಳಿದರು. ಇದನ್ನು ಇಡೀ ರಾಷ್ಟ್ರದಲ್ಲೆ ಮಾದರಿಯಾಗುತ್ತದೆಂದು ಮಾಡಿದ್ದಾರೆ, ಇದರಲ್ಲಿ ಯಾರು ಹೋಗುತ್ತಾರೆ, ಅವರನ್ನು ಕೈ ಬಿಟ್ಟು ಬಿಡಿ, ಇದರಲ್ಲಿ ಏಕೆ ಹಿಡಿತದಲ್ಲಿ ಇಟ್ಟುಕೊಳ್ಳಲು ಹೋಗುತ್ತೀರಿ, ಆ ಕಾರಣದಿಂದ ಇವತ್ತು ರಿಜರ್ವ್ ಬ್ಯಾಂಕ್ ಸಹ ಹೇಳಿದೆ, ಇಂಥಾದ್ದು ಹಲವಾರು ಇದೆ, ಇದರ ಡಿಟೈಲ್ ಹೇಳಬೇಕೆಂದರೆ 3-4 ತಾಸು ಹೋಗುತ್ತದೆ, ಇಲ್ಲವೆಂದು ಹೇಳುವುದಿಲ್ಲ. ನಾವು ಬೇಕಾದರೆ ಚರ್ಚೆ ಮಾಡೋಣ, ಅದಕ್ಕೆ ನಾನು ಹೇಳುವಂಥಾದ್ದು ಏನೆಂದರೆ, ಈಗ ನಿಮಗೆ ಇದು ತಕ್ಷಣ ಬೇಕಾಗಿರುವುದು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ತಾವು ವಿಮೆ ಮಾಡಿಸಲಾದ ಬ್ಯಾಂಕ್‌ಗಳಿಗಾಗಿ ವಿಶೇಷ ಉಪಬಂಧಗಳು, ನೀವು ಆಫೀಸರ್‌ಗಳನ್ನು ಬಿಟ್ಟರೆ, ಇದರ ಬಗ್ಗೆ ಹೇಳುವುದಾದರೆ ಬೆಳಗಾಂ ಜಿಲ್ಲೆಯಲ್ಲಿ, ಒಂದು ಸೊಸೈಟಿಯಲ್ಲಿ ರಿಜಿಸ್ಟ್ರೇಷನ್‌ಗೆ ಎಂದು 10 ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ, ನಾನು ಹೋದ ವರ್ಷವೂ ಹೇಳಿದ್ದೆ, ಅಪೆಕ್ಸ್ ಬ್ಯಾಂಕ್ ಡೈರಕ್ಟರ್ ಕಡೆಯಿಂದ ವಸೂಲು ಮಾಡಿದ್ದೇನೆ, ಇದಕ್ಕೆಲ್ಲಾ ನಾವು ಅಸರ ಮಾಡಿಕೊಡುತ್ತೇವೆ, ಇದು ಒಂದು ಕಾಯಿದೆ ಇದೆ, ಹೊರಗಡೆ ಅವರು ಏನು ಬೇಕಾದರೂ ಮಾಡಿಕೊಳ್ಳಲಿ, ಇದು ಒಂದು ಬಿಡಿ, ಆಮೇಲೆ ಇದನ್ನು ನಿರಸನಗೊಳಿಸೋಣ, ಇದು ಬೇಡವೆಂದರೆ, ಇದು ನನ್ನ ಉದ್ದೇಶವಿರುವಂಥಾದ್ದು.

†**ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ (ಕೋಲಾರ):** ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರಿಗೆ ತಿಳಿಸುವುದೇನೆಂದರೆ, ನಮ್ಮ ಭಾರತ ಸರ್ಕಾರ ಮಲ್ಟಿ ಸ್ಟೇಟ್ ಕೊ – ಆಪರೇಟಿವ್ ಆಕ್ಟ್ – ಅನ್ನು ಇತ್ತೀಚೆಗೆ ತಂದಿದೆ, ಅದು ಸೌಹಾರ್ದಕ್ಕಿಂತಲೂ ಚೆನ್ನಾಗಿದೆ ಎಂಬುದು ನನ್ನ ಅನಿಸಿಕೆ, ಅಲ್ಲಿ ಯಾವುದೇ ಹಂತದಲ್ಲಿ ಸರ್ಕಾರದ ಹಸ್ತಕ್ಷೇಪವಿಲ್ಲ. ಉದಾಹರಣೆಗೆ ನಾನು ಒಂದು ಸಂಸ್ಥೆಯ ಅಧ್ಯಕ್ಷನಾಗಿದ್ದೇ ಸುಮಾರು 450 ಕೋಟಿ ರೂಪಾಯಿಗಳ ಸರ್ಕಾರದ ಬಂಡವಾಳವಿದೆ ಅಲ್ಲಿ. ಅಂಥರಲ್ಲಿ ಬರೀ ಮೂರು ಜನ ಮಾತ್ರ, ಷೇರಿನ ಶೇ. 50ಕ್ಕಿಂತ ಮೇಲಿದ್ದರೆ ಮೂರು ಜನರನ್ನು ಹಾಕುವುದಕ್ಕೆ ಅವಕಾಶವಿದೆ. ಇಲ್ಲಿ ಇವತ್ತು ಈ ಸೌಹಾರ್ದ ಆಕ್ಟ್‌ನಲ್ಲಿ. ಇವರದ್ದು ಸರ್ಕಾರದವರು ಬಂಡವಾಳ, ಷೇರು, ಏನೂ ಇಲ್ಲ, ಇವರ ಪಾಲು ಏನೂ ಇಲ್ಲ, ಅಂದಮೇಲೆ "ಹೊಳೆ ನೀರನ್ನು ಕುಡಿಯುವುದಕ್ಕೆ, ದೊಣ್ಣೆ ನಾಯಕನ ಅಪ್ಪಣೆ" ಎನ್ನುವ ಹಾಗೆ, ಇದಕ್ಕೆ ಸರ್ಕಾರದ ಅಪ್ಪಣೆ ಏಕೆ ಬೇಕು? ಇದು ಇವತ್ತು ಇರುವಂತಹ ಸಮಸ್ಯೆಯಾಗಿದೆ. ಇಲ್ಲಿ ನೀವು ಸರ್ಕಾರದಿಂದ ಏನಾದರೂ ಪಾಲು ಕೊಡುವ ಹಾಗೆ ಇದ್ದರೆ, ನೀವು ಏನಾದರೂ ಸಹಕಾರ ಸಂಘಕ್ಕೆ ಗ್ಯಾರಂಟಿಯನ್ನು ಕೊಡುವ ಹಾಗೆ ಇದ್ದರೆ, ನೀವು ಏನಾದರೂ ಸಹಕಾರ ಸಂಘಕ್ಕೆ ಗ್ಯಾರಂಟಿಯನ್ನು ಕೊಡುವ ಹಾಗೆ ಇದ್ದರೆ, ನೀವು ಮಾಡಿ, ಅದಕ್ಕೆ ನನ್ನದು ಏನೂ ಅಭ್ಯಂತರವಿಲ್ಲ, ಅದಕ್ಕೆ ಬೇರೆ ಬೇರೆ ಸೆಕ್ಷನ್‌ಗಳು ಇವೆ, ನೀವು ಬೇಕಾದರೆ ಹೋಗಬಹುದು. 121 ಇದೆ, ಆ ದಿಕ್ಕಿನಲ್ಲಿ ನೀವು ಹೋಗಬಹುದೇ ವಿನಃ, ಇದರಲ್ಲಿ ನಿಮ್ಮ ಬಂಡವಾಳ ಏನು ಇಲ್ಲದೆ, ನಾವು ಹತ್ತಾರು ಜನರು ಸೇರಿಕೊಂಡು ಒಂದು ಸೌಹಾರ್ದ ಸಹಕಾರ ಸಂಘವನ್ನು ಮಾಡಿಕೊಂಡು, ನಾವು ಚೆನ್ನಾಗಿ ಅದನ್ನು ನಡೆಸಿಕೊಂಡು ಹೋಗುತ್ತೇವೆನ್ನುವ ಪರಿಸ್ಥಿತಿ ಇರುವಾಗ, ನಿಮ್ಮ ಇತಿಮಿತಿಗಳು ಎಲ್ಲಿವೆ? ಅಲ್ಲಿ ಸರ್ಕಾರದ ಗ್ಯಾರಂಟಿ ಇಲ್ಲ, ಇಂಥಾದ್ದಕ್ಕೆ ಏಕೆ ಬೇಕು ಎನ್ನುವಂಥಾದ್ದು ಈ ಸೌಹಾರ್ದ ಆಕ್ಟ್‌ನ ಪರಿಸ್ಥಿತಿ ಇರುವಂಥಾದ್ದು.

† ಈ ಚಿಜ್ಞೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಇದರ ಬಗ್ಗೆ ತಾವು ಸ್ವಲ್ಪ ಚಿಂತನೆ ಮಾಡಿ, ಏಕೆಂದರೆ ಇವತ್ತು ದಿನೇ, ದಿನೇ ದೇಶದಲ್ಲಿ, ಸಹಕಾರಿ ವ್ಯವಸ್ಥೆಯಲ್ಲಿ ಸ್ವಲ್ಪ ಲಿಬರಲೈಜ್ ಆಗಬೇಕು, ಎನ್ನುವಂತಹ ಚಿಂತನೆ ಇದೆ, ಬಹಳ ಹಿಂದ ಮಾನ್ಯ ಮುಖ್ಯಮಂತ್ರಿಯವರಿಗೆ ಶ್ರೀಮತಿ ಸೋನಿಯ ಗಾಂಧಿಯವರು ಪತ್ರವನ್ನು ಬರೆದು, ಈ ಸಹಕಾರಿ ಆ್ಯಕ್ಟ್‌ನಲ್ಲಿ ಈ ರೀತಿಯೇ ಇರಬೇಕೆಂದು ಬರೆದಿದ್ದಾರೆ, ಇದೆಲ್ಲದರ ಹಿನ್ನೆಲೆಯಲ್ಲಿ, ಇವೆಲ್ಲದರ ಅಗತ್ಯ ಇದೆಯೇ? ಏಕೆಂದರೆ ನೀವೆಲ್ಲಾ ಇದನ್ನು ನೋಡಬೇಕು, ನೀವು "ಮಲ್ಟಿ ಸ್ಟೇಟ್ ಕೋ -- ಅಪರೇಟಿವ್ ಆ್ಯಕ್ಟ್ -- ಅನ್ನು ತರಿಸಿ ನೋಡಿ, ಅದಕ್ಕೂ ಇದಕ್ಕೂ ನೋಡಿದಾಗ, ಇವತ್ತು ಬಂಡವಾಳವಿದ್ದರೂ ಕೂಡ ಅಲ್ಲಿ ಲಿಬರಲೈಸ್ ಮಾಡಿದ್ದಾರೆ, ಅದನ್ನು ಈ ಪಕ್ಷದವರು ಅಜೆಂಡಾವನ್ನೇ ಮಾಡಿಕೊಂಡಿದ್ದರು. ಅದನ್ನು ಹೋಬ ಪ್ರಣಾಳಿಕೆಯಲ್ಲೂ ಸೇರಿಸಿಕೊಂಡಿದ್ದರು, ನೀವು ಈ ರೀತಿ ಮಾಡಿ ನಾಳೆ ಚುನಾವಣೆ ಬರುತ್ತದೆ, ನಾಳೆ ಇದನ್ನು ಪ್ರಣಾಳಿಕೆ ಹಾಕಿಕೊಳ್ಳಿ, ಮುಂದೆ ಇದು ಚುನಾವಣೆಗೆ ಅನುಕೂಲವಾಗಬಹುದು, ಬಿಜೆಪಿಯವರು ಚುನಾವಣೆಯ ಮೊದಲು, ಇದನ್ನು ಪ್ರಣಾಳಿಕೆಯಲ್ಲಿ ಸೇರಿಸಿದ್ದರು, "ಮಲ್ಟಿ ಸ್ಟೇಟ್ ಕೊ -- ಅಪರೇಟಿವ್ ಆ್ಯಕ್ಟ್" ಅನ್ನು ಅಮೆಂಡ್ ಮಾಡುತ್ತೇವೆ, ಎಂದು, ಮಾಡಿದರು. ಅದನ್ನು ಅವರು ಹೇಳಿದ ಮೇಲೆ ಅಮೆಂಡ್ ಸಹ ಮಾಡಿದರು. ಇದನ್ನು ಇವತ್ತು ನೀವೂ ಮಾಡಿ, ಇಡೀ ರಾಜ್ಯದಲ್ಲಿ ಒಳ್ಳೆಯವಾತಾವರಣ, ಈ ಸಹಕಾರ ಸಂಘಗಳಲ್ಲಿ ಕೂಡ ಸೃಷ್ಟಿ ಮಾಡಬಹುದು ಇಡೀ ರಾಜ್ಯದಲ್ಲಿ ಒಳ್ಳೆಯ ವಾತಾವರಣ ಸಹಕಾರ ಸಂಘಗಳಲ್ಲೂ ಸೃಷ್ಟಿ ಮಾಡಬಹುದು, ಈ ಸೌಹಾರ್ದ ಏನು ಆಗುತ್ತದೆ, ಇದರಲ್ಲಿ ಸರ್ಕಾರದ ಬಂಡವಾಳ ಏನೂ ಇಲ್ಲ, ನಿಮ್ಮ ಗ್ಯಾರಂಟಿ ಇಲ್ಲ, ಅವರು ಹತ್ತಾರು ಜನರು ಸೇರಿಕೊಂಡು, ಮಾಡುವಂಥಾದ್ದು ರಿಜಿಸ್ಟಾರ್ ಮಾಡಿಕೊಳ್ಳುವುದಕ್ಕೆ ರಿಜಿಸ್ಟಾರ್ ಇರಲಿ, ನಾನು ಬೇಡವೆಂದು ಹೇಳುವುದಿಲ್ಲ, ಆದರೆ ನಿಮಗೆ ಅದಕ್ಕೆ ಇನ್ಸ್‌ಪೆಕ್ಷನ್ ಮಾಡುವಂತಹ ಅವಶ್ಯಕತೆ ಇರುವಾಗ ಅದಕ್ಕೆ ಏನಾದರೂ ಆ್ಯಕ್ಷನ್ ತೆಗೆದುಕೊಳ್ಳಿ, ಇನ್‌ಸ್ಪೆಕ್ಷನ್ ಮಾಡಿ. ಅದಕ್ಕೆ ಬೇಕಾದರೆ ಏನಾದರೂ ಆ್ಯಕ್ಟ್ ತೆಗೆದುಕೊಳ್ಳಿ, ಅಲ್ಲೂ ಐದು ಬೆರಳು ಒಂದೇ ಸಮನೆ ಇರುವುದಿಲ್ಲ, ಅಲ್ಲಿ ಇನ್‌ಸ್ಪೆಕ್ಷನ್ ಮಾಡುವಂಥಾದ್ದಕ್ಕೆ ಏನಾದರೂ ಒಂದು ಅಧಿಕಾರವನ್ನು ರಿಜಿಸ್ಟಾರ್‌ಗೆ ಕೊಡಿ, ಇದು ಬಿಟ್ಟು ಎಲ್ಲಕ್ಕೂ ಈ ಸೌಹಾರ್ದದಲ್ಲಿ ನಿಮ್ಮ ಕೈ ಹಾಕಬಾರದೆಂಬುದು ನನ್ನ ಪ್ರಾರ್ಥನೆಯಾಗಿದೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ, ಇದರಲ್ಲಿ ಬಹಳ ಇವೆ, ಅಧಿಕಾರಿಗಳಿಗೆ ಇದು ಬೇಡವಾಗಿದೆ, ಇದರ ಮೂಲವನ್ನು ನಾನು ಹೇಳುತ್ತೇನೆ, ನನಗೆ ಇದೆಲ್ಲಾ ನನಗೆ ಗೊತ್ತಿದೆ, ಇವರ ಪರಿಸ್ಥಿತಿ ಏನಾಗಿದೆ ಎಂಬುದು ನಾನು ತಿಳಿದುಕೊಂಡಿದ್ದೇನೆ, ಅಲ್ಲಿ ಯಾರೂ ಹೋಗದ ಹಾಗೆ ವ್ಯವಸ್ಥೆಯನ್ನು ಮಾಡುತ್ತಾರೆ. ಇಲ್ಲಿ ಕಾಯಿದೆಯಲ್ಲಿ ಇಲ್ಲದೇ ಇರುವುದನ್ನು ಏಕೆ ಹೊರಡಿಸಬೇಕು? ಇದನ್ನು ನಿಮ್ಮ ರಿಜಿಸ್ಟಾರ್‌ಗಳನ್ನು ಮತ್ತೆ ಸೆಕ್ರೆಟರಿಗಳನ್ನು ಕೇಳಿ, ಈ ಆದೇಶವನ್ನು ಕಾಯಿದೆಯಲ್ಲಿ ಇಲ್ಲದ ಮೇಲೆ ಏಕೆ ಹೊರಡಿಸಿದರು, ಇದು ಅದರಲ್ಲಿ ಇತ್ತಾ? ಕಾಯಿದೆಯಲ್ಲಿ ಮೂನ್ನೂರು ಜನ, 5 ಲಕ್ಷ, 8 ಲಕ್ಷ, ಇದನ್ನು ನೀವು ಮಾಡಿಕೊಳ್ಳಬೇಕಾದರೆ, ಈ ಒಂದು ಪೋರ್ಷನ್‌ಗೆ ನಾವು ಒಪ್ಪುತ್ತೇವೆ, ಆ ಪೋರ್ಶನ್ ಮಾಡಿಕೊಳ್ಳಿ ನೀವು ಇಲ್ಲಿ ಇರುವುದನ್ನೇ ಮಾಡಬೇಕೆಂದರೆ ಚರ್ಚೆ ಮಾಡಬೇಕಾಗುತ್ತದೆ. ಅದಕ್ಕೆ ಅಧ್ಯಕ್ಷರು ತಯಾರಿದ್ದರೆ ನಡೆಯಲಿ, ಇವತ್ತಿಗೆ ಇದು ಮುಗಿಯುವುದಿಲ್ಲ, ನಾಳೆಗೂ ಹೋಗಲಿ. ಹಿಂದೆ ಎರಡು ಸದನದವರು ಒಪ್ಪಿಕೊಂಡು ಮಾಡಿದ್ದು ಇದು; ಎಲ್ಲರೂ ಚರ್ಚೆ ಮಾಡಿ ಮಾಡಿದ್ದು ಇದ್ದು, ಮಾನ್ಯ ಡಿ.ಕೆ. ಶಿವಕುಮಾರ್‌ರವರು

ಗೆ ಈ ಬಿಟ್ಟೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು [illegible]

ಇದ್ದಾರ ಕಳೆದ ಸದನದಲ್ಲೂ ಈ ವಿಚಾರ ಚರ್ಚೆಗೆ ಬಂತು, ಬೇಡವೆಂದು ಹೇಳಿದಾಗ ಅವರು ಅದನ್ನು ಬಿಟ್ಟರು, ನೀವು ಪುನಃ ಇಲ್ಲಿ ತಂದಿದ್ದೀರಿ. ಅಂದರೆ ಅದರ ಮೇಲೆ ಕಣ್ಣು. ಇಲ್ಲವೆಂದರೆ ಇದು ಬೇಡವೆಂದು ನಿರಸನಗೊಳಿಸಿ, ಸರ್ಕಾರಕ್ಕೆ ಇದು ಬೇಡವೆಂದು ನಿರಸನಗೊಳಿಸಲು ತಂದುಬಿಡಿರಿ. ನಾವು ಆಯಿತು ಎನ್ನುತ್ತೇವೆ, ಅದನ್ನು ಸಂಪೂರ್ಣವಾಗಿ ತೆಗೆದುಬಿಡೋಣ, ಆ ಆಕ್ಟ್ ಅನ್ನೇ ಮುಚ್ಚಿಬಿಡೋಣ; ಇದನ್ನು ಮಾನ್ಯ ರಂಗನಾಥ್‌ರವರ ಅಧ್ಯಕ್ಷತೆಯಲ್ಲಿಯೇ ಮಾಡಿದ್ದರು, ಮಧ್ಯೆ ತಿದ್ದುಪಡಿ ಎಲ್ಲಾ ಬಂತು ಎಂದು ಎಲ್ಲರೂ ಕೂಡಿ ಇದನ್ನು ಮಾಡಿದರು, ಎರಡು ವರ್ಷದ ಹಿಂದೆ ಹೇಗೆ ಹೇಗೆ ಹೋಗಬೇಕೆಂದು; ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್‌ರವರು ಸಹಕಾರ ಸಚಿವರಿದ್ದಾಗ ತೀರ್ಮಾನ ಮಾಡಿದ್ದೇವು. ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ರಂಗನಾಥ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದರು ಅದರಲ್ಲಿ ನಾನು ನಾಣಯ್ಯನವರು ಇದ್ದರು, ಆವಾಗ ತೀರ್ಮಾನ ಮಾಡಿ ಈ ರೀತಿಯಾಗಿ ಹೋಗಬೇಕೆಂದು ಮಾಡಿದ್ದೆವು. ಈ ಸೌಹಾರ್ದದ ಮೇಲೆ ಏತಕ್ಕೆ ಕೈ ಹಾಕಿದಿರಿ? ಉಳಿದಿದ್ದನ್ನು ನಿಮ್ಮ ಆಕ್ಟ್‌ನಲ್ಲಿ ಮಾಡಿಕೊಳ್ಳಿ, ಅಲ್ಲಿ ನೀವು ದುಡ್ಡು ಬಂಡವಾಳ ಕೊಡುತ್ತೀರಿ. ಅಲ್ಲಿಯೂ ಕೂಡ ನೀವು ಮಾಡುವುದು ತಪ್ಪು ನೀವು ನಿಮ್ಮ ಪ್ರಣಾಳಿಕೆಯಲ್ಲಿ ಆಮೇಲೆ ಇಲ್ಲಿ ಆಯವ್ಯಯದಲ್ಲಿ ಓದಿದ್ದೀರಿ, ಆನಂತರ ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ಸ್ವತಂತ್ರವಾಗಿ ಬಿಡುತ್ತೇವೆಂದು ಹೇಳಿದ್ದೀರಿ. ಶ್ರೀಮತಿ ಸೋನಿಯಾಗಾಂಧಿಯವರಿಂದ ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಪತ್ರ ಬಂದಿರುವುದೆಲ್ಲಾ ಇಲ್ಲಿ ಇದ್ದಾವೆ ನಿನ್ನೆ ಮುಖ್ಯಮಂತ್ರಿಯವರು, ಶ್ರೀಮತಿ ಸೋನಿಯಾಗಾಂಧಿಯವರು ಏನು ಹೇಳುತ್ತಾರೆ ಅದನ್ನು ಖಾಚೂತಪ್ಪದೆ ಮಾಡುತ್ತೇವೆಂದು ಹೇಳಿದರು, ಸೋನಿಯಾಜೀಯವರು ಈ ಬಗ್ಗೆ ಅವರಿಗೆ ಪತ್ರವನ್ನು ಬರೆದಿದ್ದಾರೆ, ಇದೆಲ್ಲಾ ಮುಖ್ಯಮಂತ್ರಿಗಳಿಗೆ ಹೋಗಿದ, ಇದೆಲ್ಲಾ ನಿಮಗೆ ಗೊತ್ತಿಲ್ಲವೆಂದರೆ, ನಿಮಗೂ ಗೊತ್ತಿದೆ. ಇಷ್ಟೆಲ್ಲಾ ಇದ್ದರೂ ಕೂಡ ಅದೊಂದನ್ನು ಬಿಡಿ ಮುಕ್ಕಿದ್ದೆಲ್ಲಾ ನೀವು ಮಾಡಿಕೊಳ್ಳಿ.

ಶ್ರೀ ಹೆಚ್. ವಿಶ್ವನಾಥ್: ಅವರು, ಐದು ಲಕ್ಷ ಮುನ್ನೂರು ಜನರಿರಬೇಕು ಎಂದು ಹೇಳಿದರು, ಅದು ಮೂಲ ಆಕ್ಟ್‌ನಲ್ಲಿ ಇರಲಿಲ್ಲವೆಂಬುದು ನಿಜ; ಮೂಲ ಆಕ್ಟ್‌ನಲ್ಲಿ ಇಲ್ಲ. ನಾವು ಅದನ್ನು ಬೈ ವೇ ಆಫ್ ಸರ್ಕ್ಯೂಲರ್ ಇಷ್ಟು ಇರಬೇಕು ಎನ್ನುವುದನ್ನು ಮಾಡಬೇಕಾಗಿದೆ, ಏಕೆಂದರೆ ಅದಕ್ಕೆ ಎಕಾನಮಿ ವಯೆಬಿಲಿಟಿ ಇರಬೇಕು. ಎಕನಾಮಿಕ್ ವಯೆಬಿಲಿಟಿ ಇರಬೇಕೆನ್ನುವುದನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕಡ್ಡಾಯ ಮಾಡಿದೆ. ಏಕೆಂದರೆ ಕ್ರೆಡಿಟ್ ಗ್ಯಾರೆಂಟಿ ಇನ್‌ಶೂರೆನ್ಸ್ ಸ್ಕೀಂನಲ್ಲಿ ನಾನು ಆ ಬ್ಯಾಂಕ್‌ನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಇಟ್ಟರೆ, ಅದೇನಾದರೂ ದಿವಾಳಿಯಾದರೆ ಒಂದು ಲಕ್ಷದ ತನಕ ರಿಸರ್ವ್ ಬ್ಯಾಂಕ್ ಕೊಡುವುದಕ್ಕೆ ಬರಬೇಕು. ಆದರೆ ಅಲ್ಲಿ ಏನೂ ಇಲ್ಲ, ಇಷ್ಟು ಜನರಿರಬೇಕೆನ್ನುವುದಿಲ್ಲ, ಇಷ್ಟು ಹಣವಿರಬೇಕೆನ್ನುವುದಿಲ್ಲ, ಸುಮ್ಮನೆ ಮಾಡುತ್ತೇವೆ ಎನ್ನುವುದಕ್ಕೆ ಇಲ್ಲಿ ಅವಕಾಶವಿಲ್ಲ. ಅದಕ್ಕೋಸ್ಕರ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ನಾರ್ಮ್ಸ್ ಪ್ರಕಾರವೇ ಎಕನಾಮಿಕ್ ವಯಬಿಲಿಟಿಗೆ ಇಷ್ಟು ಜನ ಸದಸ್ಯರಿರಬೇಕು, ಇಷ್ಟು ಹಣವಿರಬೇಕು ಎನ್ನುವುದನ್ನು ನಾವು ಬೈ ವೇ ಆಫ್ ಗೌರ್ನಮೆಂಟ್ ಆರ್ಡರ್ ಸರ್ಕೂಲರ್ ಇಷ್ಯೂ ಮಾಡಿರುವುದನ್ನು ಹೈಕೋರ್ಟಿನಲ್ಲಿ ಚಾಲೆಂಜ್ ಮಾಡಿದರು. ಕಾನೂನಿನಲ್ಲಿ ಇಲ್ಲದೇ ಇರುವುದನ್ನು ಹೇಗೆ ಸರ್ಕೂಲರ್ ಮೂಲಕ ಕೊಟ್ಟಿರಿ ಎಂದು. ಅದನ್ನೇ ಈಗ ಕಾನೂನಿನಲ್ಲಿ ಅಳವಡಿಸಿದ್ದೇವೆ, ಅದಕ್ಕೆ ಮಾರ್ಪಾಡು ತಂದಿದ್ದೇವೆ; ತಪ್ಪಲ್ಲ ಪಾಟೀಲರೆ, ತಾವು ಇಲಾಖೆಯನ್ನು ನಡೆಸಿದಂತಹವರು, ನನಗೆ ಅರ್ಥವಾಗುವುದಿಲ್ಲ.

ಶ್ರೀ ಶಿವಾನಂದ ಎಸ್ ಪಾಟೀಲ್: ಷೇರ್ ಮೊಬಿಲೈಜೇಷನ್ ಡಿಫಾಸಿಟ್.....

ಶ್ರೀ ಎಸ್.ಎಸ್. ಪಾಟೀಲ್: ಷೇರ್ ಹೊಬಿಲೈಜೇಷನ್ ಡಿಫಾಸಿಟ್ ಬಗ್ಗೆ ಅಲ್ಲಿ ಹೇಳಿದೆ. ಅವರು ಏನು ಹೇಳುತ್ತಾರೆಂದರೆ.....

ಶ್ರೀ ಹೆಚ್. ವಿಶ್ವನಾಥ್: ಏಕೆ ಈ ರೀತಿಯಾಗಿ ಮಾತನಾಡುತ್ತೀರಿ, ನನಗೆ ಅರ್ಥವಾಗುವುದಿಲ್ಲ. ಯಾರೋ ಏನು ಹೇಳುತ್ತಾರೆಂದು.

ಶ್ರೀ ಎಸ್.ಎಸ್. ಪಾಟೀಲ್: ವಯಬಲಿಟಿ ನೋಡುವುದಕ್ಕೆ ಹೋಗಿ 5-5 ಲಕ್ಷ ತಂದಿಡು ಎಂದರೆ ಯಾರು ಬರುತ್ತಾರೇ? ನಿಮಗೆ ಇದು...

ಶ್ರೀ ಹೆಚ್. ವಿಶ್ವನಾಥ್: ಒಂದು ಕೆಲಸ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್: ದಯಮಾಡಿ ಕೈ ಮುಗಿದು ಹೇಳುತ್ತೇನೆ ಕೇಳಿ, ಇದು ಸಿಂಡಿಕೇಟ್ ಬ್ಯಾಂಕ್ ಯಾವುದರಿಂದ ಶುರುವಾಯಿತು?

ಶ್ರೀ ಹೆಚ್. ವಿಶ್ವನಾಥ್: ಮಾನ್ಯ ಪಾಟೀಲರೆ, ದಯಮಾಡಿ ತಾವು ಅರ್ಥಮಾಡಿಕೊಳ್ಳಿ. ನಿಮ್ಮ ಪತ್ತಿರ "ಕರಾಳ ಇದು" ಎಂದು ಯಾರೋಒಬ್ಬ ಹಾಕಿಕೊಟ್ಟಿರುವುದು ಇದೆ, ತಾವು ಅದನ್ನು ಇಟ್ಟುಕೊಂಡು ಓದಬೇಡಿ ದಯವಿಟ್ಟು ಇದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ನಾರ್ಮ್ಸ್ ಮೇಲೆ ಮಾಡುತ್ತಿದ್ದೇವೆ ಆದ್ದರಿಂದ ಅದನ್ನು ತೆಗೆಯುವುದಕ್ಕೆ ಬರುವುದಿಲ್ಲ, ದಯವಿಟ್ಟು ಕೇಳಿ. ಅದಕ್ಕೆ ವಯಾಬಿಲಿಟಿ ಬೇಕು, ಎಕಾನಾಮಿಕ್ ವಯಾಬಿಲಿಟಿ ಇಲ್ಲದೆಯೇ" ತಾವು ಏನು ಮಾತನಾಡುತ್ತಿದ್ದೀರಿ?

ಶ್ರೀ ಎಸ್.ಎಸ್. ಪಾಟೀಲ್: ರಿಸರ್ವ್ ಬ್ಯಾಂಕ್‌ದ್ದು ಏನು ಇದೆ ಓದಿ ಹೇಳಿ.

ಶ್ರೀ ಹೆಚ್. ವಿಶ್ವನಾಥ್: ಇದನ್ನು ತಾವು ವಿರೋಧ ಮಾಡಿದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಇಲ್ಲಿ ನೋಡಿರಿ,

Sri H. Vishwanath: You must understand.

ಶ್ರೀ ಎಸ್.ಎಸ್. ಪಾಟೀಲ್: ರಿಸರ್ವ್ ಬ್ಯಾಂಕ್ ಎಂದು ಇಲ್ಲಿ ಮಾಡಿದ್ದೀರಿ. ಇದನ್ನು ಇಟ್ಟುಕೊಂಡುಬಿಡಿರಿ, ರಿಸರ್ವ್ ಬ್ಯಾಂಕ್‌ನವರು ನಿಮೆ ಮಾಡಿದ ಬ್ಯಾಂಕುಗಳು ವಿಶೇಷ ಉಪಬಂಧಗಳು ಎಂದು ಮಾಡಿದ್ದೀರಿ.

ಶ್ರೀ ಹೆಚ್. ವಿಶ್ವನಾಥ್: ಹೌದಪ್ಪ, ಎಕನಾಮಿಕ್ ವಯಾಬಿಲಿಟಿ, ಮಾನ್ಯ ಶಿವಾನಂದ ಪಾಟೀಲರೇ, ದಯವಿಟ್ಟು ಇದರ ಬಗ್ಗೆ ನೀವು ಹೇಳಿ. ನೀವು ಬ್ಯಾಂಕ್‌ಗೆ ಛೇರ್ಮನ್ ಆಗಿದ್ದೀರಿ.

ಶ್ರೀ ಎಸ್.ಎಸ್. ಪಾಟೀಲ್: ಇದನ್ನು ನೀವು ಇಟ್ಟುಕೊಳ್ಳಿರಿ.

ಶ್ರೀ ಹೆಚ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಈ ತರಹ ಮಾಡಿದರೆ ಏನೂ ಮಾಡುವುದಕ್ಕಾಗುವುದಿಲ್ಲ, ಸುಮ್ಮನೆ ಹೇಳಿದ್ದೆ ಹೇಳು ಎಂದರೆ ಇದು ಏನಾಗುತ್ತದೆ? See, the man who runs the department.

ಶ್ರೀ ಎಸ್.ಎಸ್. ಪಾಟೀಲ್: ನಾನು ಹೇಳುವುದನ್ನು ತಾವು ಕೇಳಿ. ಇದು ನಿಮಗೆ ಉಳಿಯಲಿ ಎಂದು ನಾನು ಹೇಳುತ್ತಿರುವುದು. ಇದನ್ನು ತಾವು ಇಟ್ಟುಕೊಳ್ಳಿರಿ.

ಶ್ರೀ ಹೆಚ್. ವಿಶ್ವನಾಥ್: ದಯಮಾಡಿ ತಾವು ಪೂರ್ಣವಾಗಿ ಓದಿ ಸ್ವಾಮಿ ನೀವು ಏನೂ ಬಿಡದೆ ಸುಮ್ಮನೆ ಯಾರೋ ಬೀದಿಯಲ್ಲಿ ಹೋಗುವವನು ಪ್ರಿಂಟ್ ಹಾಕಿಕೊಟ್ಟಿದ್ದನ್ನು ಓದಿದರೆ ಅದು ಇನ್ನೇನಾಗುತ್ತದೆ?

ಶ್ರೀ ಎಸ್.ಎಸ್. ಪಾಟೀಲ್: ಅದು ಪ್ರಿಂಟ್ ಆಗಿದೆ ಎಂದು ನಾನು ಹೇಳಲಿಲ್ಲ. ಅದನ್ನು ಏತಕ್ಕಾಗಿ ತಿದ್ದುತ್ತೀರಿ ಅದರ ಬಗ್ಗೆ ಮೊದಲು ಹೇಳಿ. ಬಿಡಿರಿ ಶಿವಾನಂದರವರೇ, ಇದರ ಕಾನ್ಸಫ್ಟ್ ಬೇರೆ, ಹಳೆಯ ಕಾನ್ಸ್‌ಫ್ಟ್ ಬೇರೆ.

ಅಧ್ಯಕ್ಷರು: ಮಾನ್ಯ ವಿಶ್ವನಾಥ್‌ರವರೆ, ತಾವು ಒಂದು ಕೆಲಸವನ್ನು ಮಾಡಿ, ಈಗ ಬೇರೆ ಬಿಲ್ಲುಗಳನ್ನು ತೆಗೆದುಕೊಳ್ಳೋಣ. ಪಕ್ಕದಲ್ಲಿ ಕುಳಿತು ಅವರಿಗೆ ಎಕ್ಸ್‌ಪ್ಲೇನ್ ಮಾಡಿ ಹೇಳಿ. ಆಮೇಲೆ ವಿ .... ಟೇಕ ಅಪ್.

ಶ್ರೀ ಹೆಚ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅಂಥಹದ್ದು ಏನೂ ಇಲ್ಲ. To be frank with you, this is prompted by somebody. ನಾವು ಎಲ್ಲವನ್ನೂ ಪಾಪಸ್ಸು ತೆಗೆದುಕೊಂಡಿದ್ದೇವೆ. ಸುಮ್ಮನೆ ಯಾವುದೋ ಒಂದನ್ನು ಹಿಡಿದುಕೊಂಡು ಇದನ್ನೇ ಆಗಬೇಕು ಎಂದರೆ ಹೇಗಾಗುತ್ತದೆ?

ಶ್ರೀ ಎಸ್.ಎಸ್. ಪಾಟೀಲ್: ನಿಮಗೆ ಧೈರ್ಯ ಏತಕ್ಕಾಗಿ ಬಂತು ಎಂದು ನಮಗೆ ಗೊತ್ತು ನಿಮಗೆ ಹೇಳುವವರು ಕೇಳುವವರು ಯಾರೂ ಇಲ್ಲ. ಇದಕ್ಕೆ ತಾವು ಕೈಹಾಕುತ್ತೀರಿ ಅದರ ಬಗ್ಗೆ ಹೇಳಿ.

ಶ್ರೀ ಹೆಚ್. ವಿಶ್ವನಾಥ್: ನಿಮಗೆ ಅರ್ಥವಾಗುವುದಿಲ್ಲವೇ?

ಶ್ರೀ ಎಸ್.ಎಸ್. ಪಾಟೀಲ್: ನಮಗೆ ಇದರ ಬಗ್ಗೆ ಹೇಳುವುದಕ್ಕೆ ಹೋಗಬೇಡಿ. ಯಾರ ಮಾತೂ ಕೇಳುವಂತಹ ಮೂರ್ಖನಲ್ಲ ನಾನು.

ಅಧ್ಯಕ್ಷರು: ತಾವು ಒಂದು ಕೆಲಸವನ್ನು ಮಾಡಿ, ಮಿಸ್ಟರ್ ಶಿವಕುಮಾರ್‌ರವರೆ, ತಾವು ಬನ್ನಿ ಬಿಲ್‌ನ್ನು ತೆಗೆದುಕೊಳ್ಳೋಣ. ಇದನ್ನು ನಂತರ ತೆಗೆದುಕೊಳ್ಳೋಣ.

ಶ್ರೀ ಎಸ್.ಎಸ್. ಪಾಟೀಲ್: ಈ ಕಾಯಿದೆಯನ್ನು ತಯಾರು ಮಾಡಿದವನು ನಾನು, ಇನ್ನೊಬ್ಬರ ಮಾತು ಕೇಳಿ ಹೇಳುತ್ತಾರೆಂದರಲ್ಲಾ ತಾವು, ಅಷ್ಟು ಮೂರ್ಖನಲ್ಲ ನಾನು. ಇದನ್ನೆಲ್ಲಾ ಯಾವ ಉದ್ದೇಶಕ್ಕಾಗಿ ಮಾಡಿದ್ದೇವೆ ಎಂಬುದು ನನಗೆ ಗೊತ್ತಿದೆ. ಇನ್ನೊಬ್ಬನನ್ನೂ ನಾನು ಏತಕ್ಕೆ ಕೇಳಲು ಹೋಗಲಿ?

ಅಧ್ಯಕ್ಷರು: ಈಗ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ 1998ರ ಬಗ್ಗೆ ಮಾನ್ಯ ಸಚಿವರೇ ಹೇಳಿ.

ಶ್ರೀ ಶಿವಾನಂದ ಎಸ್ ಪಾಟೀಲ್: ಮಾನ್ಯ ಅಧ್ಯಕ್ಷರೆ, ಬಿಲ್‌ನ್ನು ತಾವು ಡೆಫರ್ ಮಾಡುತ್ತೀರಾ ಅಥವಾ ಆಕ್ಸೆಪ್ಟ್ ಮಾಡುತ್ತೀರಾ?

ಅಧ್ಯಕ್ಷರು: ನಿಮಗೆ ಅರ್ಧಗಂಟೆ ಸಮಯವನ್ನು ಕೊಡುತ್ತೇನೆ, ತಾವು ಎಕ್ಸ್‌ಪ್ಲೇನ್ ಮಾಡಿ ಹೇಳಿಕೊಳ್ಳಿ.